# ಸಂಯಮ ಎಂದರೆ ಏನು ?



ಕಲೆ : ಪುರುಷೋತ್ತಮ ಕಾರಂತ

ಮಹಾರಾಜ ಪುಷ್ಯಮಿತ್ರನು ಅಂದು ಪ್ರಾತಃಕಾಲದಲ್ಲಿ ಅಶ್ವಮೇಧಯಾಗದ ಪೂರ್ಣಾಹುತಿಯನ್ನು ಸಂಭ್ರಮದಿಂದ ಮಾಡಿದನು. ಹಿಂದಿನ ರಾತ್ರಿಯಲ್ಲಿ ಅತಿಥಿಗಳ ಸತ್ಕಾರಕ್ಕಾಗಿ ನೃತ್ಯೋತ್ಸವವನ್ನು ಏರ್ಪಡಿಸಲಾಗಿತ್ತು. ಆ ಕಾರ್ಯಕ್ರಮದಲ್ಲಿ ಪತಂಜಲಿ ಮಹರ್ಷಿಗಳು ಉಪಸ್ಥಿತರಿದ್ದರು. ಇದನ್ನು ನೋಡಿದ್ದ ಅವರ ಶಿಷ್ಯ ಚೈತ್ರರಿಗೆ ಸಂಶಯ ಕಾಡುತ್ತಿತ್ತು. ತಾನು ಓದಿದ್ದ ಯೋಗಸೂತ್ರಗಳನ್ನು ನೆನೆಸಿಕೊಂಡು ಗುರುವಿನ ನಡತೆಯನ್ನು ಶಂಕಿಸಿ ಕೇಳಿಯೇ ಬಿಟ್ಟ:

"ಗುರುವೇ, ಗೀತನೃತ್ಯರಾಸರಂಗಗಳು ಚಿತ್ತವೃತ್ತಿ ನಿರೋಧಕ್ಕೆ ಪೂರಕವೇ? " ತನ್ನ ನಡತೆಯ ಬಗ್ಗೆ ಪ್ರಶ್ನಿಸಿದ ಶಿಷ್ಯನಿಗೆ ಗುರುವೆಂದರು : "ಸಂಯಮ ಎಂದರೆ ಏನೆಂದು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಆತ್ಮದ ಸ್ವರೂಪವೇ ರಸ. ರಸೋ ವೈ ಸಃ. ರಸವನ್ನು ವಿಕೃತಿಗೊಳಿಸದೆ ಶುದ್ಧವಾಗಿ ಕಂಡರೆ ಅದುವೇ ಸಂಯಮ. ವಿಕೃತಿಯ ಭಯದಿಂದ ರಸ ಬಾಹಿರನಾದರೆ ಅದು ಆತ್ಮಘಾತಕವಾಗುವುದು. ಭಿಕಾರಿಗೆ ಹೆದರಿ ಗೃಹಿಣಿಯು ಅಟ್ಟವನ್ನು ಏರಿದರೆ, ಪಶುಗಳಿಗೆ ಅಂಜಿ ರೈತ ಬೆಳೆಯನ್ನು ಬೆಳೆಯದಿದ್ದರೆ ಅದು ವಿನಾಶವೇ ಸರಿ. ಆತ್ಮನು ರಸವಿಹೀನನೆಂದು ಭಾವಿಸಬೇಡ. ತೋಯಿಸದ ಜಲದಂತೆ,. ಕಾವಿಲ್ಲದ ಬೆಂಕಿಯಂತೆ ಅದು ಭ್ರಮೆಯಾಗುವುದಷ್ಟೆ."

ವಿ.ಪ್ರ.